RNU AIR DHARWAD

# MAY 18, 2024

## ALL INDIA RADIO - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಸಾಮಾಜಿಕ ಪಿಡುಗು,** ಹೆಣ್ಣು ಭ್ರೂಣ ಹತ್ಯೆಯನ್ನು, ಬೇರು ಸಮೇತ ಕೀಳಲು, ಕಠಿಣ ಕ್ರಮ – ದಿನೇಶ್ ಗುಂಡೂರಾವ್.
- **ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸುದೃಢ** – ಎಚ್.ಕೆ. ಪಾಟೀಲ.
- **ಕೇರಳದಲ್ಲಿ ವೆಸ್ಟ್ ನೈಲ್ ಜ್ವರ ಬಾಧೆ;** ಮೈಸೂರು ಜಿಲ್ಲೆ ಸೇರಿ, ರಾಜ್ಯದ ಗಡಿ ಭಾಗಗಳಲ್ಲಿ ಹೈ ಅಲರ್ಟ್ ಘೋಷಣೆ.
- **ಮೈಸೂರಿನ ನಂಜರಾಜ ಬಹದ್ದೂರು ಛತ್ರದಲ್ಲಿ,** ಇಂದು ಮತ್ತು ನಾಳೆ, ದೇಸಿ ಅಕ್ಕಿ ಮೇಳ.

<><><>

**ಹೆಣ್ಣು ಭ್ರೂಣ ಹತ್ಯೆ ಎಂಬ ಸಾಮಾಜಿಕ** ಪಿಡುಗನ್ನು, ಬೇರು ಸಮೇತ ಕಿತ್ತು ಹಾಕಲು, ತಮ್ಮ ಸರ್ಕಾರ ಹಾಗೂ ಆರೋಗ್ಯ ಇಲಾಖೆ ಪಣ ತೊಟ್ಟಿದೆ. ಈ ನಿಟ್ಟಿನಲ್ಲಿ ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ಕಠಿಣ ಕ್ರಮ ಕೈಗೊಳ್ಳಲಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ, ಪೋಸ್ಟ್ ಮಾಡಿರುವ ಅವರು, ಹೆಣ್ಣು ಭ್ರೂಣ ಹತ್ಯೆಯನ್ನು ಸಂಪೂರ್ಣವಾಗಿ ತಡೆಗಟ್ಟಲು, ದಿಟ್ಟ ಹೆಜ್ಜೆ ಇಟ್ಟಿದ್ದೇವೆ ಎಂದಿದ್ದಾರೆ.

<><><>

**ವಿಪಕ್ಷ ನಾಯಕ ಆರ್.ಅಶೋಕ್,** ಈ ವಿಷಯವಾಗಿ ಪತ್ರಿಕೆಯೊಂದಕ್ಕೆ ಲೇಖನ ಬರೆದಿದ್ದಾರೆ. ಅಮಾನು ' ಭ್ರೂಣ ಪತ್ತೆ ಮತ್ತು ಹತ್ಯೆ ಜಾಲವನ್ನು ಬೇಧಿಸುವಲ್ಲಿ, ಮುತುವರ್ಜಿ ತೋರಿದ್ದರೆ, ಜಾಮೀನಿನ ಮೇಲಿರುವ ಆರೋಪಿಯೊಬ್ಬ, ಮತ್ತೊಮ್ಮೆ ಅದೇ ದುಷ್ಕೃತ್ಯ ಎಸಗುವ ದುಸ್ಸಾಹಸ ಮಾಡುತ್ತಿರಲಿಲ್ಲ ಎಂದು, ಟೀಕಿಸಿದ್ದಾರೆ.

<><><>

**ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ,** ಎಕ್ಸ್ ಜಾಲತಾಣದಲ್ಲಿ ಪ್ರತಿಕ್ರಿಯಿಸಿ, ಸಾಮಾಜಿಕ ಸುಭದ್ರತೆಗೆ ಹೆಸರಾಗಿದ್ದ ಹೆಮ್ಮೆಯ ಕರ್ನಾಟಕವನ್ನು, ಕಾಂಗ್ರೆಸ್ ಸರ್ಕಾರ ತನ್ನ ಒಂದು ವ ್ಷದ ಆಡಳಿತದಲ್ಲಿ, ಕೊಲೆಗಡುಕರ ತಾಣವನ್ನಾಗಿಸುತ್ತಿದೆ ಎಂದು ಆರೋಪಿಸಿದ್ದಾರೆ.

<><><>

**ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎನ್ನುವ,** ಬಿಜೆಪಿ ನಾಯಕರ ಆರೋಪದಲ್ಲಿ ಹುರುಳಿಲ್ಲ ಎಂದು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ, ಎಚ್.ಕೆ. ಪಾಟೀಲ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹುಬ್ಬಳ್ಳಿ, ಕೊಡಗು ಸೇರಿದಂತೆ, ರಾಜ್ಯದ ವಿವಿಧೆಡೆ ನಡೆದ ಯುವತಿಯರ ಹತ್ಯೆ ಪ್ರಕರಣಗಳಿಗೆ ಸಂಬಂಧಿಸಿ, ಗೃಹ ಇಲಾಖೆ ಈಗಾಗಲೇ ಬಿಗಿ ಕ್ರಮ ಕೈಗೊಂಡಿದೆ ಎಂದರು.

<><><>

**ಹುಬ್ಬಳ್ಳಿಯ ವೀರಾಪುರ ಓಣಿ ನಿವಾಸಿ,** ಹತ್ಯೆಯಾದ ವಿದ್ಯಾರ್ಥಿನಿ, ಅಂಜಲಿ ಅಂಬಿಗೇರ ನಿವಾಸಕ್ಕೆ, ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು. ವಿಧಾನ ಪರಿ ತ್ ಸದಸ್ಯ ಎನ್. ರವಿಕುಮಾರ್, ಎಸ್.ವಿ. ಸಂಕನೂರು ಸೇರಿದಂತೆ, ಬಿಜೆಪಿಯ ಹಿರಿಯ ಮುಖಂಡರು ಉಪಸ್ಥಿತರಿದ್ದರು.

<><><>

**ಉತ್ತರಕನ್ನಡ ಜಿಲ್ಲೆ, ಯಲ್ಲಾಪುರ ತಾಲೂಕು,** ತೊಟ್ಟಿಲಗುಂಡಿಯಲ್ಲಿ ವನವಾಸಿ ಮಕ್ಕಳಿಗಾಗಿ, ಇಂದು 'ಗಿರಿ ಮಯೂರಿ' ವಿಶೇಷ ಬೇಸಿಗೆ ಶಿಬಿರ ಆಯೋಜಿತವಾಗಿದೆ. ಸಹ್ಯಾದ್ರಿ ಸಂಚಯ ಹಾಗೂ ಮಂಗಳೂರಿನ ಲಿಟಲ್ ರೇ ಫೌಂಡೇಷನ್ ಆಶ್ರಯದಲ್ಲಿ, ಖ್ಯಾತ ರಂಗಭೂಮಿ ಕಲಾವಿದೆ, ಮಂಚಿಕೆರೆ ಗಿರಿಜಾ ಸಿದ್ಧಿ ಈ ಶಿಬಿರ ಸಂಘಟಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಈ ಕುರಿತು ಹೆಚ್ಚಿನ ಮಾಹಿತಿ ನೀಡಿದ್ದಾರೆ, ಮಂಗಳೂರಿನ ಸಹ್ಯಾದ್ರಿ ಸಂಚಯದ ವಿಶ್ವಸ್ಥ ದಿನೇಶ ಹೊಳ್ಳ.

<><><>

**ದಿನೇಶ ಹೊಳ್ಳ ಧ್ವನಿ 32 ಸೆಕೆಂದುಗಳು**

<><><>

**ರಾಜ್ಯದಲ್ಲಿ ಈ ಬಾರಿ ಎಸ್ ಎಸ್.ಎಸ್.ಎಲ್.ಸಿ** ಮತ್ತು ಪಿ.ಯು.ಸಿಯಲ್ಲಿನ ಫಲಿತಾಂಶ ನಿರೀಕ್ಷಿಸಿದ ್ಟ ಬಂದಿಲ್ಲ. ಹೀಗಾಗಿ ವಿದ್ಯಾರ್ಥಿಗಳಿಗೆ ಈ ವ ್ಷ, ಕೃಪಾಂಕ, ಗ್ರೇಸ್ ಮಾರ್ಕ್ಸ್ ನೀಡಲು ಸರ್ಕಾರ ನಿರ್ಧರಿಸಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಬೆಂಗಳೂರಿನ ಮಾತನಾಡಿದ ಅವರು, ಕೃಪಾಂಕ ನೀಡಲು, ಮುಖ್ಯಮಂತ್ರಿಗಳು ಸಮ್ಮತಿಸಿದ್ದು, ಇದು ಈ ವರ್ಷಕ್ಕೆ ಮಾತ್ರ ಸೀಮಿತವಾಗಲಿದೆ ಎಂದರು.

<><><>

**ಜೂನ್ 7 ರಿಂದ ಜೂನ್ 14ರ ವರೆಗೆ,** ಎಸ್.ಎಸ್.ಎಲ್.ಸಿ. ಎರಡನೇ ಪರೀಕ್ಷೆ ನಡೆಯಲಿದ್ದು, ಆಸಕ್ತ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ನೋಂದಣಿ ದಿನಾಂಕವನ್ನು, ನಾಳೆ ಭಾನುವಾರದ ವರೆಗೆ ವಿಸ್ತರಿಸಲಾಗಿದೆ ಎಂದು, ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ತಿಳಿಸಿದೆ. ಇದು ವರೆಗೆ 2 ಲಕ್ಷ ವಿದ್ಯಾರ್ಥಿಗಳು, ನೋಂದಣಿ ಮಾಡಿಕೊಂಡಿದ್ದಾರೆ. ಎಸ್ಎಸ್ಎಲ್ಸಿ ಅನುತ್ತೀರ್ಣರಾದ ಹಾಗೂ ಕಡಿಮೆ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ, ಫಲಿತಾಂಶ ವೃದ್ಧಿಸಿಕೊಳ್ಳಲು, ಎರಡನೇ ಮತ್ತು ಮೂರನೇ ಪರೀಕ್ಷೆ ನಡೆಸಲಾಗುತ್ತಿದೆ.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಕೇರಳದಲ್ಲಿ ವೆಸ್ಟ್ ನೈಲ್ ಜ್ವರ ಕಾಣಿಸಿಕೊಂಡಿರುವ ಹಿನ್ನೆಲೆ,** ಕರ್ನಾಟಕ ಮತ್ತು ಕೇರಳ ಗಡಿ ಭಾಗಗಳಲ್ಲಿ, ತೀವ್ರ ನಿಗಾ ವಹಿಸಲಾಗಿದೆ. ಮೈಸೂರು ಜಿಲ್ಲೆ ಸೇರಿದಂತೆ, ರಾಜ್ಯದ ಗಡಿ ಭಾಗಗಳಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ಹೆಗ್ಗಡದೇವನ ಕೋಟೆ ತಾಲೂಕು ಆರೋಗ್ಯಾಧಿಕಾರಿ ಡಾಕ್ಟರ್ ರವಿಕುಮಾರ್ ಆಕಾಶವಾಣಿಗೆ ಮಾಹಿತಿ ನೀಡಿ, ಮೈಸೂರಿನ ಹೆಚ್.ಡಿ.ಕೋಟೆ ತಾಲೂಕಿನ ಬಾವಲಿ ಚೆಕ್ ಪೋಸ್ಟ್‌ನಲ್ಲಿ ಸಂಚರಿಸುವ ವಾಹನ ಸವಾರರು ಹಾಗೂ ಪ್ರಯಾಣಿಕರನ್ನು ಪರಿಶೀಲಿಸಲಾಗುತ್ತಿದ್ದು, ಜ್ವರದ ಲಕ್ಷಣ ಕಂಡು ಬಂದವರನ್ನು ಶೀಘ್ರವೇ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದೆ ಎಂದು ತಿಳಿಸಿದರು.

<><><>

**ಈ ಮಧ್ಯೆ, ಕಲಬುರಗಿ ನಗರಕ್ಕೆ ಕುಡಿಯುವ ನೀರು ಸರಬರಾಜು** ಮಾಡುವ, ಭೀಮಾ ಹಾಗೂ ಬೆಣ್ಣೆ ತೋರಾ ನದಿಗಳಲ್ಲಿ, ನೀರಿನ ಮಟ್ಟ ಕಡಿಮೆಯಾಗಿದ್ದು, ಸೂಪರ್ ಕ್ಲೋರಿನೇಶನ್ ಕೈಗೊಂಡು, ಸಾರ್ವಜನಿಕರಿಗೆ ಸರಬರಾಜು ಮಾಡಲಾಗುತ್ತಿದೆ. ಕುದಿಸಿ, ಆರಿಸಿ ಕುಡಿಯುವಂತೆ, ಕಲಬುರಗಿ ಕಾರ್ಯಪಾಲಕ ಅಭಿಯಂತರರು, ತಿಳಿಸಿದ್ದಾರೆ.

<><><>

**ಮೈಸೂರಿನ ನಂಜರಾಜ ಬಹದ್ದೂರು ಛತ್ರದಲ್ಲಿ,** ಇಂದು ಮತ್ತು ನಾಳೆ, ದೇಸಿ ಅಕ್ಕಿ ಮೇಳ ಜರುಗಲಿದೆ. ದಾವಣಗೆರೆ ಜಿಲ್ಲೆ, ಹರಿಹರದ ಕುಂಬಳೂರಿನ, ರಾಷ್ಟ್ರ ಪ್ರಶಸ್ತಿ ವಿಜೇತ ರೈತ ವಿಜ್ಞಾನಿ, ಆಂಜನೇಯ ಈ ಮೇಳದ ವಿಶೇಷ ಆಕರ್ಷಣೆಯಾಗಿದ್ದಾರೆ. ಅವರು, 200ಕ್ಕೂ ಹೆಚ್ಚು ದೇಸಿ ಭತ್ತದ ತಳಿಗಳನ್ನು ಸಂರಕ್ಷಿಸಿ, ಭತ್ತದ ಬೀಜ ಬ್ಯಾಂಕ್ ಆರಂಭಿಸಿದ್ದಾರೆ. ಆಂಜನೇಯ ಅವರು ಅಭಿವೃದ್ಧಿ ಪಡಿಸಿದ 'ಸಿಂಧೂರ ಮಧುಸಾಲೆ' ಮತ್ತು 'ಅಂದನೂರು ಸಣ್ಣ, ಭತ್ತದ ತಳಿಗಳಿಗೆ' ಹೊಸ ದಿಲ್ಲಿಯ ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ 'ರೈತರ ತಳಿ' ಎಂದು ನೋಂದಣಿ ಮಾಡಿ ಪೇಟೆಂಟ್ ನೀಡಿದೆ.

<><><>

**ಅವಿಭಜಿತ ಧಾರವಾಡ ಜಿಲ್ಲೆಯ,** ಪಾರಂಪರಿಕ ಮಾವು ಬೆಳೆಗಾರರ ಸಂಘಟನೆಗಾಗಿ, ಧಾರವಾಡದಲ್ಲಿ 'ಮಾವು ಬೆಳೆಗಾರರ ಬಳಗ' ಅಸ್ತಿತ್ವಕ್ಕೆ ಬಂದಿದೆ. ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ – ವಾಲ್ಮಿ ನಿರ್ದೇಶಕ, ಡಾಕ್ಟರ್ ರಾಜೇಂದ್ರ ಪೋದ್ದಾರ್ ನೇತೃತ್ವದಲ್ಲಿ, ಪ್ರಗತಿಪರ ಮಾವು ತೋಟಿಗರು, ಈ ಬಳಗವನ್ನು ಮುನ್ನಡೆಸುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಡಾಕ್ಟರ್ ರಾಜೇಂದ್ರ ಪೋದ್ದಾರ್.

<><><>

**ಡಾಕ್ಟರ್ ರಾಜೇಂದ್ರ ಪೋದ್ದಾರ್ ಧ್ವನಿ 41 ಸೆಕೆಂದುಗಳು**

<><><>

**ರಾಮನಗರ ತಾಲೂಕಿನ ಅಚ್ಚಲು ಗ್ರಾಮದ ಬಳಿ,** ಗುಡ್ಡದ ಸೋಣೆಯಲ್ಲಿ ಈಜಲು ಹೋದ, ಮೂವರು ಬಾಲಕರು ಮೃತಪಟ್ಟಿದ್ದಾರೆ. ರಾಮನಗರದ ಸುಲ್ತಾನ್ ನಗರದ, ಎಂಟು ಮಂದಿ ಬಾಲಕರಲ್ಲಿ, 14 ವರ್ಷದ ಶಾಬಾಜ್, 13 ವರ್ಷದ ಸುಲ್ತಾನ್ ಹಾಗೂ 16 ವರ್ಷದ ರಿಹಾನ್ ಖಾನ್ ಜಲ ಸಮಾಧಿಯಾಗಿದ್ದಾರೆ.

<><><>

**ಉತ್ತರಕನ್ನಡ ಜಿಲ್ಲೆ, ಭಟ್ಕಳ ಕಡವಿನಕಟ್ಟಾ** ನದಿಯಲ್ಲಿ ಈಜಲು ಹೋಗಿದ್ದ ಬಾಲಕ ಮತ್ತು ಆತನ ರಕ್ಷಣೆಗೆ ಮುಂದಾದ ಮಹಿಳೆ, ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

<><><>

**ಶುಕ್ರವಾರ, ಮೇ 17 ರಂದು,** ಅಧಿಕ ರಕ್ತದೊತ್ತಡ ವಿಶ್ವ ದಿನ ಆಚರಿಸಲಾಯಿತು. "ನಿಮ್ಮ ರಕ್ತದೊತ್ತಡವನ್ನು ನಿಖರವಾಗಿ ಅಳೆಯಿರಿ, ಅದನ್ನು ನಿಯಂತ್ರಿಸಿ, ಹೆಚ್ಚು ಕಾಲ ಬದುಕಿ" ಎಂಬುದು, ಈ ವರ್ಷದ ಘೋಷ ವಾಕ್ಯವಾಗಿದೆ. ಅಧಿಕ ರಕ್ತದೊತ್ತಡ ತಲೆನೋವು, ಮಂದ ದೃಷ್ಟಿ ಹಾಗೂ ಎದೆನೋವಿಗೆ ಕಾರಣವಾಗಬಹುದು. ಈ ಲಕ್ಷಣಗಳು ಕಂಡು ಬಂದಲ್ಲಿ, ತಕ್ಷಣ ಸಮೀಪದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಆರೋಗ್ಯ ತಪಾಸಣೆ ಮಾಡಿಕೊಳ್ಳಿ ಎಂದು, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ, ಸಾರ್ವಜನಿಕರಲ್ಲಿ ಮನವಿ ಮಾಡಿದೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಖ್ಯಾತ ಸಮಾಜ ವಿಜ್ಞಾನಿ,** ಧಾರವಾಡದ ಡಾಕ್ಟರ್ ಪ್ರಕಾಶ ಭಟ್ ಅವರ ಕೃತಿ, 'ಹಳ್ಳಿಗಳನ್ನು ಕಟ್ಟುವ ಕ ್ಟ ಸುಖ', ನಾಳೆ ಬೆಳಗ್ಗೆ 10:30ಕ್ಕೆ, ಧಾರವಾಡದ ಆಲೂರ ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಲೋಕಾರ್ಪಣೆಗೊಳ್ಳಲಿದೆ. ಹಿರಿಯ ಪರಿಸರ ವಿಜ್ಞಾನಿ, ಪತ್ರಕರ್ತ ನಾಗೇಶ ಹೆಗಡೆ ಪಾಲ್ಗೊಳ್ಳಲಿದ್ದಾರೆ.

<><><>

**ಬಾಗಲಕೋಟೆ ಜಿಲ್ಲೆ, ಗುಳೇದಗುಡ್ಡದ** ಹಿರಿಯ ಚಿತ್ರ ಕಲಾವಿದ ಮಹಾದೇವ ಜಗತಾಪ ಅವರ, ಏಕ ವ್ಯಕ್ತಿ ಚಿತ್ರಕಲಾ ಪ್ರದರ್ಶನ, ಇಂದಿನಿಂದ ಮೂರು ದಿನಗಳ ಕಾಲ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಆಯೋಜಿತವಾಗಿದೆ.

<><><>

**ಕ್ರಾಂತಿವೀರ ಸಿಂಧೂರ ಲಕ್ಷ್ಮಣ** ಜಯಂತಿಯನ್ನು, ಇಂದು ಹಲವೆಡೆ ಆಚರಿಸಲಾಗುತ್ತಿದೆ.

<><><>

**ದೂರ ಸಂಪರ್ಕ ವಿಶ್ವ ದಿನವನ್ನು,** ಶುಕ್ರವಾರ ಆಚರಿಸಲಾಯಿತು.

<><><>

**ಈ ಬಾರಿಯ ನೈಋುತ್ಯ ಮುಂಗಾರು ಮಳೆ,** ಇದೇ 31 ಕ್ಕೆ ಕೇರಳ ಪ್ರವೇಶಿಸಲಿದೆ.

<><><>

**ರಾಷ್ಟ್ರೀಯ ವಿಪತ್ತು ಕಾರ್ಯ ಪಡೆ ತಂಡದಿಂದ,** ಹಾಸನ ಹೊರವಲಯದ ಕೈಗಾರಿಕಾ ಪ್ರದೇಶದಲ್ಲಿ, ತುರ್ತು ಕಾಯಾಚರಣೆ, ಅಣಕು ಪ್ರದರ್ಶನ ಜರುಗಿತು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಸಾಮಾಜಿಕ ಪಿಡುಗು,** ಹೆಣ್ಣು ಭ್ರೂಣ ಹತ್ಯೆಯನ್ನು, ಬೇರು ಸಮೇತ ಕೀಳಲು, ಕಠಿಣ ಕ್ರಮ – ದಿನೇಶ್ ಗುಂಡೂರಾವ್.

- **ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸುದೃಢ** – ಎಚ್.ಕೆ. ಪಾಟೀಲ.
- **ಕೇರಳದಲ್ಲಿ ವೆಸ್ಟ್ ನೈಲ್ ಜ್ವರ ಬಾಧೆ;** ಮೈಸೂರು ಜಿಲ್ಲೆ ಸೇರಿ, ರಾಜ್ಯದ ಗಡಿ ಭಾಗಗಳಲ್ಲಿ ಹೈ ಅಲರ್ಟ್ ಘೋಷಣೆ.
- **ಮೈಸೂರಿನ ನಂಜರಾಜ ಬಹದ್ದೂರು ಛತ್ರದಲ್ಲಿ,** ಇಂದು ಮತ್ತು ನಾಳೆ, ದೇಸಿ ಅಕ್ಕಿ ಮೇಳ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**